ಇ) ಇಲ್ಲ. ಪ್ರಸ್ತಾವನೆಯು ಸರ್ಕಾರದ ಪರಿಶೀಲನೆಯಲ್ಲಿದೆ.

ಸವನೂರು 110 ಕೆ.ವಿ. ಸ್ಟೇಷನ್ ಕೆ.ಇ.ಬಿ. ಇಲಾಖೆಯವರು ಕೂಡಲೆ ಪ್ರಾರಂಭಿಸುವುದು

589 - ಶ್ರೀ ಮಂಜುನಾಥ್ ಸಿ. ಕುನ್ನೂರು (ಶಿಗ್ಗಾಂವ್) : ಮಾನ್ಯ ಇಂಧನ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಸವಣೂರು ಮತ್ತು ಶಿಗ್ಗಾಂವ್ ತಾಲ್ಲೂಕುಗಳಲ್ಲಿ ವಿದ್ಯುಚ್ಛಕ್ತಿ ಎಷ್ಟು (ಕೆ.ವಾ. ಸ್ಟೇಷನ್) ವಿದ್ಯುತ್ ಸ್ಥಾವರಗಳಿವೆ.

ಆ) ಸದರೀ ವಿದ್ಯುತ್ ಘಟಕದಿಂದ ಇನ್‌ಕಮಿಂಗ್ ವೋಲ್ಟೇಜ್ ಎಷ್ಟು?

ಇ) ಉಭಯ ತಾಲ್ಲೂಕುಗಳಲ್ಲಿ ವಿದ್ಯುಚ್ಛಕ್ತಿ ಅಭಾವವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಈ) ಹಾಗಿದ್ದಲ್ಲಿ ಸವಣೂರು ತಾಲ್ಲೂಕಿಗೆ 110 ಕೆವಿ ಸ್ಟೇಷನ್ ಮಂಜೂರಾಗಿ ಎಷ್ಟು ದಿವಸಗಳಾದವು?

ಉ) ಸದರೀ ವಿದ್ಯುತ್ ಘಟಕಗಳನ್ನು ಎಂದು ಪ್ರಾರಂಭಿಸಲಾಗುವುದು?

ಶ್ರೀ ವಿ. ಮುನಿಯಪ್ಪ (ಇಂಧನ ರಾಜ್ಯ ಸಚಿವರು) :

ಅ) ಸವಣೂರು ಮತ್ತು ಶಿಗ್ಗಾಂವ್‌ಗಳಲ್ಲಿ ತಲಾ ಒಂದೊಂದು 33:11 ಕೆವಿ ವಿದ್ಯುತ್ ಸಬ್‌ಸ್ಟೇಷನ್ ಇದೆ. ಸವಣೂರಿನಲ್ಲಿರುವ ವಿದ್ಯುತ್ ಸಬ್-ಸ್ಟೇಷನ್ನಿನ ಸಾಮರ್ಥ್ಯ 10ಎವಿಎ ಮತ್ತು ಶಿಗ್ಗಾಂವ್‌ನಲ್ಲಿರುವ ವಿದ್ಯುತ್ ಸಬ್-ಸ್ಟೇಷನ್ನಿನ ಸಾಮರ್ಥ್ಯ 5 ಎಂವಿಎ.

ಆ) ಸದರೀ ವಿದ್ಯುತ್ ಸಬ್-ಸ್ಟೇಷನ್‌ಗಳಿಗೆ ಇನ್‌ಕಮಿಂಗ್ ವೋಲ್ಟೇಜ್ 33 ಕೆವಿ ಇರುತ್ತದೆ.

ಇ) ಹೌದು.

ಈ) ಸವಣೂರಿನಲ್ಲಿ ಹಾಲಿ ಇರುವ 33:11 ಕೆವಿ ಸಬ್-ಸ್ಟೇಷನ್‌ನ್ನು 110 ಕೆವಿ ಸ್ಟೇಷನ್ನಾಗಿ ಮೇಲ್ದರ್ಜೆಗೊಳಿಸಲು ಮಂಡಳಿಯ ತಾಂತ್ರಿಕ ಸಮಿತಿಯ ಒಪ್ಪಿಗೆ ದೊರೆತಿದ್ದು, ಮಂಡಳಿಯ ಆಡಳಿತಾತ್ಮಕ ಮಂಜೂರಾತಿಯನ್ನು ಪಡೆಯಲು ವಿವರವಾದ ಯೋಜನಾ ವರದಿಯನ್ನು ಸಿದ್ಧಪಡಿಸಲಾಗುತ್ತಿದೆ.

ಉ) ಈ ಕೆಲಸವನ್ನು 1996ನೇ ಮಾರ್ಚ್ ವೇಳೆಗೆ ಮುಗಿಸಲು ಉದ್ದೇಶಿಸಲಾಗಿದೆ.

ದ.ಕನ್ನಡ ಜಿಲ್ಲೆಯಲ್ಲಿ ನೂತನವಾಗಿ ಬರಲಿರುವ ಕೈಗಾರಿಕಾ ಉದ್ಯಮಗಳಿಗೆ ವಿದ್ಯುಚ್ಛಕ್ತಿ ಸರಬರಾಜು

545 - ಶ್ರೀ ಕೆ. ಪ್ರತಾಪ ಚಂದ್ರ ಶೆಟ್ಟಿ (ಕುಂದಾಪುರ) : ಮಾನ್ಯ ಇಂಧನ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ನೂತನವಾಗಿ ಬರುವ ಕೈಗಾರಿಕಾ ಉದ್ಯಮಿಗಳಿಗೆ ಎಷ್ಟು ಮೆಗಾ ವ್ಯಾಟ್ ವಿದ್ಯುತ್ ಅಗತ್ಯವಿದೆ.

ಆ) ಅಗತ್ಯವಿರುವ ವಿದ್ಯುಚ್ಛಕ್ತಿಯನ್ನು ಹೇಗೆ ಪೂರೈಸಲಾಗುವುದು?

ಇ) ಅಗತ್ಯವಿರುವ ವಿದ್ಯುಚ್ಛಕ್ತಿಯನ್ನು ಸರ್ಕಾರವೇ ಪೂರೈಸುತ್ತದೆಯೇ ಅಥವಾ ಕೈಗಾರಿಕೋದ್ಯಮಿಗಳು ಖಾಸಗಿಯಾಗಿ ಪೂರೈಸಲಾಗುತ್ತಿರುವರೆ?

ಶ್ರೀ. ವಿ. ಮುನಿಯಪ್ಪ (ಇಂಧನ ರಾಜ್ಯ ಸಚಿವರು) :

ಅ) ಒಟ್ಟು 208 ಎಂ.ವಿ.ಎ. (ಮೆಗಾ ವೋಲ್ಟ್ ಆಂಪಿಯರ್)ಗಳೆಂದು ಅಂದಾಜು ಮಾಡಿದೆ.

ಆ) ಈ ಬೇಡಿಕೆಯ ಬಹುಭಾಗವನ್ನು ವಿದ್ಯುಚ್ಛಕ್ತಿ ಮಂಡಲಿಯೇ ಪೂರೈಸುತ್ತಿದೆ. 500 ಕೆ.ವಿ.ಎ. ಮೇಲ್ಪಟ್ಟು ಬೇಡಿಕೆ ಇರುವ ಕೈಗಾರಿಕೆಗಳು ಒಟ್ಟು ಬೇಡಿಕೆಯ $\frac{1}{3}$ ಭಾಗವನ್ನು ಕ್ಯಾಪ್ಟಿವ್ ಜನರೇಷನ್ ಮೂಲಕ ಉತ್ಪಾದಿಸಬೇಕೆಂಬ ಶರತ್ತು ಹಾಕಲಾಗಿದೆ. ಅಲ್ಲದೆ ಖಾಸಗಿ ವಲಯದಲ್ಲಿ ನಿರೀಕ್ಷಿಸಿರುವ ವಿದ್ಯುತ್ ಉತ್ಪಾದನೆ ಕೂಡ ಮುಂಬರುವ ವರ್ಷಗಳಲ್ಲಿ ಮಂಡಳಿಗೆ ಲಭ್ಯವಿರುತ್ತದೆ.

ಬೆಳಗಾಂವ ಜಿಲ್ಲೆ ಬೈಲಹೊಂಗಲ ತಾಲ್ಲೂಕಿನ ಹೊಳಿನಾಗಲಾಪೂರ ಗ್ರಾಮದ ಸ್ಥಳಾಂತರ

550 - ಶ್ರೀ ಶಿವಾನಂದ ಹೆಚ್. ಕೌಜಲಗಿ (ಬೈಲಹೊಂಗಲ) : ಮಾನ್ಯ ಉಪ ಮುಖ್ಯ ಮಂತ್ರಿಗಳು ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) *ಬೆಳಗಾಂವ ಜಿಲ್ಲೆಯ ಬೈಲಹೊಂಗಲ ತಾಲ್ಲೂಕಿನ ಹೊಳಿನಾಗಲಾಪೂರ ಗ್ರಾಮವನ್ನು ಸ್ಥಳಾಂತರಿಸಲು ಸರ್ಕಾರಕ್ಕೆ ಮನವಿಗಳು ಬಂದಿವೆಯೇ;*

ಆ) *ಈ ಗ್ರಾಮದ ಸುತ್ತಲೂ ನೀರು ನಿಂತಿದ್ದು ಜನರ ಆರೋಗ್ಯ ಕೆಡುತ್ತಿರುವ ಬಗ್ಗೆ ಹಾಗೂ ಸುರಕ್ಷತೆ ದೃಷ್ಟಿಯಿಂದ ಆ ಗ್ರಾಮದ ಜನರನ್ನು ಬೇರೆ ಕಡೆಗೆ ಸ್ಥಳಾಂತರಿಸಲು ಕ್ರಮ ಕೈಗೊಳ್ಳಲಾಗುವುದೇ; ಹಾಗಿದ್ದಲ್ಲಿ ಈ ಗ್ರಾಮವನ್ನು ಸ್ಥಳಾಂತರಿಸಲು ಯಾವ ಕ್ರಮ ಕೈಕೊಳ್ಳಲಾಗಿದೆ;*

ಇ) *ಈಗಾಗಲೇ ಕಂದಾಯ ಅಧಿಕಾರಿಗಳು ಹಾಗೂ ಸ್ಪೆಷಲ್ ಡೆಪ್ಯೂಟಿ ಕಮೀಷನರ್‌ಮಲಪ್ರಭಾ ಪ್ರಾಜೆಕ್ಟ್ ಇವರು ಈ ಗ್ರಾಮಕ್ಕೆ ಭೇಟಿ ಕೊಟ್ಟಿರುವರೇ?*

ಶ್ರೀ ಎಸ್. ಎಂ. ಕೃಷ್ಣ (ಉಪ ಮುಖ್ಯಮಂತ್ರಿಗಳು) :

ಅ) ಹೌದು

ಆ) ಮಲಪ್ರಭಾ ಜಲಾಶಯದಲ್ಲಿ ಪೂರ್ಣ ನೀರಿನ ಮಟ್ಟ ಸಂಗ್ರಹವಾದಾಗ ಹೊಳಿನಾಗಲಿಪುರದ ಸಮೀಪದಲ್ಲಿರುವ ಹಳ್ಳಗಳಲ್ಲಿ ಸುಮಾರು 400 ರಿಂದ 500 ಮೀ. ಅಂತರದಲ್ಲಿ ಹಿನ್ನೀರು ನಿಲ್ಲುತ್ತದೆ. ಈ ಗ್ರಾಮದ ಪುನರ್ ನಿವೇಶನದ ಅವಶ್ಯಕತೆಯನ್ನು ಪರಿಶೀಲಿಸಲಾಗುತ್ತಿದೆ.

ಇ) ವಿಶೇಷ ಜಿಲ್ಲಾಧಿಕಾರಿಗಳು (ಮಲಪ್ರಭಾ ಯೋಜನೆ) ಇವರು ಭೇಟಿ ನೀಡಿರುವುದಾಗಿ ತಿಳಿದು ಬಂದಿದೆ. ಕಂದಾಯ ಇಲಾಖೆ ಅಧಿಕಾರಿಗಳ ಭೇಟಿ ಬಗ್ಗೆ ಮಾಹಿತಿ ಇಲ್ಲ.

ಸ್ಥಗಿತಗೊಂಡ ಚಿಕ್ಕಬುದನೂರು ನೀರಾವರಿ ಕೆರೆ ಕೆಲಸವನ್ನು ಪ್ರಾರಂಭಿಸುವುದು

551 - ಶ್ರೀ ಶಿವಾನಂದ ಹೆಚ್.ಕೌಜಲಗಿ (ಬೈಲಹೊಂಗಲ) : ಮಾನ್ಯ ಸಣ್ಣ ನೀರಾವರಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) *ಬೆಳಗಾಂವ ಜಿಲ್ಲಾ, ಸವದತ್ತಿ ತಾಲ್ಲೂಕಿನ ಚಿಕ್ಕಬುದನೂರ ಕೆರೆ ಕಟ್ಟುವ ಕೆಲಸಕ್ಕೆ ಆಡಳಿತಾತ್ಮಕ ಹಾಗೂ ತಾಂತ್ರಿಕ ಮಂಜೂರಾತಿ ಯಾವಾಗ ನೀಡಲಾಯಿತು;*

ಆ) *ಈ ಕೆಲಸಕ್ಕೆ ಇಲ್ಲಿಯವರೆಗೆ ಎಷ್ಟು ಹಣ ವಿರ್ಚಾಗಿರುವುದು;*

ಇ) *ಹಣಕಾಸಿನ ತೊಂದರೆಯಿಂದ ಈ ಕೆಲಸ ಸ್ಥಗಿತಗೊಂಡ ಸಂಗತಿ ನಿಜವೇ;*

ಈ) *ಈ ಕೆಲಸ ಪ್ರಾರಂಭಿಸಲು ಸರಕಾರದವರು ಕ್ರಮ ಕೈಗೊಳ್ಳವರೇ;*